**<u>ಸಾಕ್ಷಿಯನ್ನು ದಿನಾಂಕ 25-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಕೆ.ಜಿ ವಕೀಲರಿಂದಃ</u>**

1. 2003–04 ರಿಂದ ನಾನು ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಬರೆಯುವ ಪತ್ರಗಳ ಸಂಬಂಧ ನಾನು ಪ್ರತ್ಯೇಕ ರಿಜೀಸ್ಟರ್ ಇಟ್ಟುಕೊಂಡಿಲ್ಲ. ಈ ದಾವೆಯ ಪಕ್ಷಗಾರರು ಇಬ್ಬರು ನನ್ನ ಪರಿಚಯಸ್ಥರು. ವಾದಿ ನನಗೆ 2013–14 ನೇ ಇಸವಿಯಿಂದ ನನಗೆ ಪರಿಚಯವಿದ್ದಾರೆ. ಪ್ರತಿವಾದಿಯರು ನನಗೆ 2012 ರಿಂದ ಪರಿಚಯವಿದ್ದಾರೆ. 1 ನೇ ಪ್ರತಿವಾದಿಗೆ ವಾಯಸ್ಸಾಗಿತ್ತು ಅವರ ಮನೆಯ ವ್ಯವಹಾರವನ್ನು ಅವರ ಮಕ್ಕಳು ಮಾಡುತ್ತಿದ್ದಾರೆ ಎಂದರೆ ಸರಿ.

2. ನಿ.ಪಿ.–1 ರ ಪತ್ರ ಬರವಣಿಗೆ ಆಗುವ ಮೊದಲು ಉಭಯ ಪಕ್ಷಗಾರರ ನಡುವೆ ಏನೇನು ಮಾತುಕತೆಯಾಗಿತ್ತು ಗೊತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಪತ್ರ ಬರೆಸುವಾಗ ಸದರಿ ವಿಷಯವನ್ನು ಹೇಳಿದ್ದರು ಎನ್ನುತ್ತಾರೆ. ಪತ್ರದಲ್ಲಿ ದಾಖಲಿಸಿರುವ ವಿಷಯಗಳನ್ನು ಹೊರತುಪಡಿಸಿ ಅವರ ನಡುವೆ ಬೇರೇನು ಮಾತುಕತೆಯಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ.

3. ವಾದಿ ಅಂಗಡಿ ವ್ಯಪಾರ ಮಾಡುತ್ತಾರೆ. ಅವರು ಹಣಕಾಸಿನ ವ್ಯವಹಾರವನ್ನು ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ಬಳಿ ನಾನು ಸಹ ಸಾಲ ಪಡೆದಿದ್ದೇನೆ ಎನ್ನುವುದು ಸುಳ್ಳು. 1 ನೇ ಪ್ರತಿವಾದಿಗೆ ಒಟ್ಟು 2 ಎಕರೆ ಜಮೀನು ಇತ್ತು. ಆ ಪೈಕಿ 20 ಗುಂಟೆ ಜಮೀನನ್ನು

ನಿ.ಪಿ.–1 ರಡಿ ಮಾರಾಟ ಮಾಡಿದ್ದಾರೆ. ನಿ.ಪಿ.–1 ರ ದಾಖಲೆಯನ್ನು ಬರೆಸುವ ಮೊದಲು ವಾದಿ ನನ್ನ ಬಳಿ ಬೇರೆ ಪತ್ರಗಳನ್ನು ಬರೆಸಿದ್ದ ಬಗ್ಗೆ ನಿಖರವಾಗಿ ನನಗೆ ನೆನಪಿಲ್ಲ. ನಿ.ಪಿ.–1 ರ ದಾಖಲೆಯನ್ನು ಈಗ್ಗೆ 10–11 ವರ್ಷಗಳ ಹಿಂದೆ ತಯಾರಿಸಲಾಗಿತ್ತು.

4. ಸಾಮಾನ್ಯವಾಗಿ ಪತ್ರ ಬರೆಯುವ ಮೊದಲು ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡುತ್ತೇವೆ ಎಂದರೆ ಸಾಕ್ಷಿ ಪಕ್ಷಗಾರರು ಕೊಟ್ಟ ದಾಖಲೆಯನ್ನು ಪರಿಶೀಲನೆ ಮಾಡುತ್ತೇವೆ ಎನ್ನುತ್ತಾರೆ. ಪಕ್ಷಗಾರರು ಕೊಟ್ಟ ದಾಖಲೆಗಳ ಪ್ರಕಾರ ದಾವಾ ಜಮೀನು 1 ನೇ ಪ್ರತಿವಾದಿಗೆ ದರ್ಕಾಸ್ತ ಮೂಲಕ ಬಂದಿತ್ತು. ಸದರಿ ದಾಖಲೆಯನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನ ಎಲ್ಲಾ ದಾಖಲೆ 1 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ. ನಿ.ಪಿ.–1 ರ ಪತ್ರಕ್ಕೆ 1 ನೇ ಪ್ರತಿವಾದಿಯ ಮಕ್ಕಳ ಸಹಿ ಪಡೆಯುವ ಅಗತ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ವಾದಿಯ ಕೋರಿಕೆ ಮೇರೆಗೆ 1 ನೇ ಪ್ರತಿವಾದಿಯ ಮಕ್ಕಳು ಸಹ ಸಹಿ ಮಾಡಿದರು ಎನ್ನುತ್ತಾರೆ. ಸದರಿ ದಾಖಲೆ ಬರೆಯಲು ವಾದಿಯೇ ನನಗೆ ಎಲ್ಲಾ ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ಉಭಯ ಪಕ್ಷಗಾರರು ಕೊಟ್ಟರು ಎನ್ನುತ್ತಾರೆ. ದಾಖಲೆಗಳು ಸಿಗುವವರೆಗೆ ಕರಾರಿನ ಅವಧಿ ಮುಂದುವರೆಯಕ್ಕದ್ದು ಎಂಬ ವಿಷಯವನ್ನು ವಾದಿಯೇ ಹೇಳಿ ಬರೆಸಿದ್ದಾರೆ ಎಂದರೆ ಸರಿ.

5. ನಿ.ಪಿ.–1 ರ ಪತ್ರ ತಯಾರಾಗುವ ಮೊದಲು 2 ನೇ ಪ್ರತಿವಾದಿ ಮಾತ್ರ ನನ್ನ ಬಳಿ ಓಡಾಡಿದ್ದರು ಮತ್ತು ಪತ್ರ ಬರವಣಿಗೆಯಾದ ನಂತರ ಸಹಿ ಮಾಡಲು ವಾದಿ ಹಾಗೂ ಇತರೆ

ಪ್ರತಿವಾದಿಯರು ಬಂದರು ಎಂದರೆ ಸರಿ. ಉಭಯ ಪಕ್ಷಗಾರರ ಸಹಿಗಳನ್ನು ಉಪ-ನೊಂದಣಾಧಿಕಾರಿಯವರ ಕಚೇರಿಯಲ್ಲಿ ತೆಗೆದುಕೊಳ್ಳಲಾಗಿದೆ ಎಂದರೆ ಸರಿ. ಸದರಿ ದಾಖಲೆಯ ಸಾಕ್ಷಿದಾರರನ್ನು ವಾದಿಯವರೇ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ವಾದಿ-ಪ್ರತಿವಾದಿಯರ ನಡುವೆ ಹಣಕಾಸಿನ ವಿನಿಮಯ ಯಾವ ರೀತಿ ಆಯಿತು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನಗುದು ರೂಪದಲ್ಲಿ ಆಯಿತು ಎನ್ನುತ್ತಾರೆ. ಸದರಿ ವಿಷಯವನ್ನು ನಿ.ಪಿ.-1 ರ ದಾಖಲೆಯಲ್ಲಿ ಬರೆಯಲಾಗಿದೆ. ನನಗೆ ಯಾವುದೇ ಖುದ್ದು ಮಾಹಿತಿ ಇಲ್ಲ ಮತ್ತು ವಾದಿ ಹೇಳಿದಂತೆ ನಿ.ಪಿ.-1 ರ ಪತ್ರವನ್ನು ಬರೆದು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ವಾದಿ ಹೇಳಿದಂತೆ ನಿ.ಪಿ.-1 ರ ದಾಖಲೆಯನ್ನು ಸೃಷ್ಟಿಮಾಡಿ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**